ವಾವಿಸಂ:760

# ಆಕಾಶವಾಣಿಯಲ್ಲಿ ಅಕ್ಷರ ಜಾತ್ರೆಯ ಸಡಗರ

**ಧಾರವಾಡ (ಕರ್ನಾಟಕ ವಾರ್ತೆ) ಡಿ.28:** ಧಾರವಾಡಲ್ಲಿ ಜನವರಿ 4, 5 ಮತ್ತು 6 ರಂದು ನಡೆಯಲಿರುವ 84ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ವಿಶಿಷ್ಟವಾಗಿಸಲು ಧಾರವಾಡ ಆಕಾಶವಾಣಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ, ಪ್ರಸಾರ ಮಾಡುತ್ತಿದೆ. ನುಡಿ ಜಾತ್ರೆಯ ಸಡಗರ ಎನ್ನುವ ಕಾರ್ಯಕ್ರಮ ಪ್ರತಿ ದಿನ ಬೆಳಿಗ್ಗೆ 7:45ಕ್ಕೆ ಪ್ರಸಾರವಾಗುತ್ತಿದ್ದು ಸಮ್ಮೇಳನದ ಸಿದ್ಧತೆ ಕುರಿತು ಪ್ರತಿ ದಿನ ಮಾಹಿತಿ ನೀಡಲಾಗುವುದು. ಜನವರಿ 1 ರಿಂದ 7ರವರೆಗೆ ಸಂಜೆ 7:45ಕ್ಕೆ ಅನೇಕ ಸಾಹಿತ್ಯ ದಿಗ್ಗಜರ ನೆನಪುಗಳನ್ನು ಪ್ರಸಾರ ಮಾಡಲಾಗುತ್ತದೆ. ದ.ರಾಬೇಂದ್ರೆ, ಕುವೆಂಪು, ಶಿವರಾಮ ಕಾರಂತ, ಯು.ಆರ್.ಅನಂತಮೂರ್ತಿ, ಸಿಂಪಿ ಲಿಂಗಣ್ಣ, ಎಂ.ಎಂ.ಕಲಬುರ್ಗಿ, ಶಾಂತಾದೇವಿ ಮಾಳವಾಡ ಅವರೊಂದಿಗಿನ ಸಂದರ್ಶನಗಳು ಆ ಕಾಲದ ನೆನಪುಗಳನ್ನು ಹೊತ್ತು ತರಲಿವೆ.

ಸಮ್ಮೇಳನ ನಡೆಯುವ ಮೂರು ದಿನಗಳಂದು ಅಖಿಲ ಭಾರತ 84ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಪ್ರಾಯೋಜಕತ್ವದಲ್ಲಿ ಹಲವಾರು ಕಾರ್ಯಕ್ರಮಗಳು ರಾಜ್ಯದ ಎಲ್ಲ ಆಕಾಶವಾಣಿ ಕೇಂದ್ರಗಳಿಂದ ಪ್ರಸಾರವಾಗಲಿವೆ. ಉದ್ಘಾಟನಾ ಸಮಾರಂಭ, ಎಲ್ಲ ಗೋಷ್ಠಿಗಳ ವರದಿ, ಸಮಾರೋಪ ಸಮಾರಂಭದ ಬಾನುಲಿ ವರದಿಗಳು ರಾಜ್ಯದ ಎಲ್ಲ ಬಾನುಲಿ ಕೇಂದ್ರಗಳಿಂದ ಪ್ರಸಾರವಾಗಲಿವೆ. ಸಮ್ಮೇಳನ ನಡೆಯುವ ಮೂರು ದಿನಗಳಂದು ಮಧ್ಯಾಹ್ನ 12 ಗಂಟೆಯಿಂದ ನೇರ ಪ್ರಸಾರ ಇರಲಿದೆ ಎಂದು ಆಕಾಶವಾಣಿ ಪ್ರಕಟಣೆ ತಿಳಿಸಿದೆ.

************